Online Newspaper Clipping Service
**Dated, Sunday 05th March – 2017**

**Pg.No.02**

DECCAN HERALD

# 'Nurses should develop service mentality'

**KOLAR: Prof Sailakshmi of Nimhans, Bengaluru, said medical profession is sacred and earning money should not be the goal of doctors and nurses.**

She was speaking after inaugurating the convention of Devaraj Urs College of Nursing here on Friday.

She said, "Medical profession is the best among all the professions as it saves life. But of late, the doctors and nurses have taken to money making rather than serving patients."

Prof Sailakshmi said service mentality is important in medical career. Diseases can be cured with durgs, love and affection. Smile, courtesy and patience are very important for nurses.The should not go after money, she advised.

She said work pressure affects the physical and mental health of nurses.





**Nursing graduates take oath at the convocation of Devaraj Urs College of Nursing in Kolar on Friday. (Right) Prof Sailakshmi of Nimhans presents degree certificate to a student.** DH PHOTOS

Therefore, the nurses should take of their health along with that of patients. Career and personal life both are important for nurses. The nurses should maintain their health well. Then only, they can serve the patients well, she observed.

Prof Sailakshmi said a number of hospitals are coming nowadays and employment opportunities are increasing. But only 50% of the nursing students are entering the field. The rest are finding jobs in the fields which provide them more money, she expressed concern.

Head of the Department of Medical Surgical Nursing Prof Zeanath Cariena administered oath to graduating students. Students, who scored highest marks, were felicitated. Students shared their views on their student life.

Devaraj Urs Education Institutions secretary G H Nagaraj, director J Rajendra, Devaraj Urs Higher Education and Research Institute Chancellor Dr S Kumar, VC Dr C V Raghuveer, principal Dr G Vijayalakshmi and Prof Gayatri were present.

**DH News Service**

ವಿಜಯ ಕರ್ನಾಟಕ

### ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

# ಉತ್ತಮ ಸೇವೆಯಿಂದ ವೃತ್ತಿಗೌರವ ಎತ್ತಿ ಹಿಡಿಯಿರಿ




**ಕೋಲಾರದ ಡಿ.ದೇವರಾಜ ಅರಸು ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.**

**ಕೋಲಾರ:** 'ರೋಗಿಗಳನ್ನು ಉತ್ತಮ ರೀತಿಯಲ್ಲಿ ಆರೈಕೆ ಮಾಡುವ ಮೂಲಕ ಶುಶ್ರೂಷಕಿಯರು ತಮ್ಮ ವೃತ್ತಿ ಗೌರವವನ್ನು ಎತ್ತಿ ಹಿಡಿಯಬೇಕು,' ಎಂದು ನಿಮ್ಹಾನ್ಸ್‌ನ ನರ್ಸಿಂಗ್ ವಿಭಾಗದ ಪ್ರೊ. ಡಾ. ಸಾಯಿಲಕ್ಷ್ಮೀ ಗಾಂಧಿ ಅವರು ತಿಳಿಸಿದರು.

ನಗರದ ಹೊರವಲಯದಲ್ಲಿರುವ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ನಡೆದ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ನರ್ಸಿಂಗ್ ಎಂಬುದು ವೃತ್ತಿಯಾಗಿರದೆ, ಸೇವೆಯಾಗಿದೆ. ಆದ್ದರಿಂದ ಶುಶ್ರೂಷಕಿಯರಾಗಿ ಸೇವೆ ಸಲ್ಲಿಸುವವರಿಗೆ ಮುಗುಳು ನಗೆ, ತಾಳ್ಮೆ ಹಾಗೂ ಸೌಜನ್ಯ ಮುಖ್ಯ ಎಂದು ಅಭಿಪ್ರಾಯಪಟ್ಟರು.

ವಿಜ್ಞಾನ, ತಂತ್ರಜ್ಞಾನ ಮುಂದುವರಿದಂತೆ ನರ್ಸ್‌ಗಳು ಒತ್ತಡದಿಂದ ಕಾರ್ಯ ನಿರ್ವಹಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲವು ವೇಳೆ ದಿನದ 24ಗಂಟೆಯೂ ಕೆಲಸ ಮಾಡುವಂತಹ ಸಂದರ್ಭಗಳು ಘಟಿಸುತ್ತಿವೆ. ತಮ್ಮ ಆರೋಗ್ಯವನ್ನು ಪಣಕ್ಕಿಟ್ಟು, ರೋಗಿಗಳ ಶುಶ್ರೂಷೆಯಲ್ಲಿ ತೊಡಗುತ್ತಾರೆ. ಇದರಿಂದ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ಸಿಲುಕಿ, ಸೂಕ್ತ ರೀತಿಯಲ್ಲಿ ಕಾರ್ಯ ನಿರ್ವಹಿಸದಂತಾಗುತ್ತದೆ.

ಆದ್ದರಿಂದ ಶುಶ್ರೂಷಕಿಯರು ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು. ಹಾಗೂ ಸೇವೆಯಲ್ಲಿ ಶಿಸ್ತು, ಸಮಯ ಪ್ರಜ್ಞೆ, ಬದ್ಧತೆ ಮತ್ತು ಪ್ರಮಾಣಿಕತೆಗೆ ಹೆಚ್ಚು ಒತ್ತು ನೀಡಬೇಕು ಎಂದು ಡಾ. ಸಾಯಿಲಕ್ಷ್ಮೀ ಗಾಂಧಿ ಹೇಳಿದರು.

ಇತ್ತೀಚೆಗೆ ನರ್ಸಿಂಗ್ ಕ್ಷೇತ್ರಕ್ಕೆ ಬರುವವರ ಸಂಖ್ಯೆ ಕಡಿಮೆಯಾಗುತ್ತಿದೆ. ನರ್ಸಿಂಗ್ ಕೋರ್ಸ್‌ಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಪೈಕಿ ಶೇ.50ರಿಂದ 60 ಮಂದಿ ಮಾತ್ರ ನರ್ಸಿಂಗ್ ಸೇವೆಗೆ ಹೋಗುತ್ತಾರೆ. ಉಳಿದವರು ಬೇರೆ ಕ್ಷೇತ್ರಗಳಲ್ಲಿ ಕೆಲಸವನ್ನು ಹುಡುಕಿ ಹೊರಡುತ್ತಿದ್ದಾರೆ. ಆದರೆ ದಿನೇ ದಿನೇ ಎಲ್ಲೆಡೆ ಉತ್ತಮ ದರ್ಜೆಯ ಆಸ್ಪತ್ರೆಗಳು ತಲೆ ಎತ್ತುತ್ತಿದ್ದು, ನರ್ಸಿಂಗ್ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ. ಈ ಅವಕಾಶಗಳನ್ನು ಎಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು.

ಪ್ರೀತಿ, ವಿಶ್ವಾಸದಿಂದ ರೋಗಿಗಳ ಆರೈಕೆ ಮಾಡಲು ಫ್ಲಾರೆನ್ಸ್ ನೈಟಿಂಗೇಲ್ ಹಾಗೂ ಸೇಂಟ್ ಮದರ್ ತೆರೇಸಾ ಅವರನ್ನು ಎಲ್ಲಾ ನರ್ಸಿಂಗ್ ವಿದ್ಯಾರ್ಥಿಗಳು ಆದರ್ಶವಾಗಿ ಇಟ್ಟುಕೊಂಡು ಉತ್ತಮ ಸೇವೆ ಸಲ್ಲಿಸಲು ಮುಂದಾಗಬೇಕು ಎಂದು ಅವರು ತಿಳಿಸಿದರು.

ಕಾಲೇಜಿನ ನರ್ಸಿಂಗ್ ವಿಭಾಗದ ಮುಖ್ಯಸ್ಥೆ ಜೇನತ್ ಕರೀನಾ ಅವರು ಎಲ್ಲ ವಿದ್ಯಾರ್ಥಿಗಳಿಗೂ ಪ್ರಮಾಣ ವಚನ ಬೋಧಿಸಿದರು. ಪ್ರೊ.ಡಾ. ರಾಧ ವಾರ್ಷಿಕ ವರದಿ ಓದಿದರು. ವಿದ್ಯಾರ್ಥಿ ಶ್ರೀ ಕೃಷ್ಣ ಅವರು ತಮ್ಮ ಅನಿಸಿಕೆ ಹಂಚಿಕೊಂಡರು.

ಇದೇ ವೇಳೆ ಬಿಎಸ್ಸಿ ನರ್ಸಿಂಗ್ ವಿಭಾಗದ ವಿದ್ಯಾರ್ಥಿಗಳು ಮತ್ತು ಡಿಪ್ಲೊಮಾ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಹಾಗೂ ಪ್ರತಿಭಾ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

ಸಮಾರಂಭದಲ್ಲಿ ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ನಿರ್ದೇಶಕ ಜೆ.ರಾಜೇಂದ್ರ, ವೈದ್ಯಕೀಯ ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್, ಉಪ ಕುಲಪತಿ ಡಾ.ಸಿ.ವಿ.ರಘುವೀರ್, ನರ್ಸಿಂಗ್ ಪ್ರಿನ್ಸಿಪಾಲ್ ಡಾ.ಜಿ.ವಿಜಯಲಕ್ಷ್ಮಿ, ಪ್ರೊ.ಗಾಯತ್ರಿ, ಎಂಜಿನಿಯರ್ ಹನುಮಂತರಾವ್ ಹಾಜರಿದ್ದರು.